ಫೋನ್ ನಂ. 080-22243926
ಫ್ಯಾಕ್ಸ್ ನಂ. 080-22110134
ವೆಬ್‌ಸೈಟ್ : www.kptcl.com
ಇಮೇಲ್ ಐಡಿ: dgmtkptcl@rediffmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

ಸಂಖ್ಯೆ: ಕವಿಪ್ರನಿನಿ/ಬಿ19/345/85-86

ನಿಗಮ ಕಾರ್ಯಾಲಯ
ಕಾವೇರಿ ಭವನ
ಬೆಂಗಳೂರು-560009
ದಿನಾಂಕ: 26.10.2021

## ಸುತ್ತೋಲೆ

**ವಿಷಯ:** ಬೆಲೆ ವ್ಯತ್ಯಾಸಕ್ಕಾಗಿ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆಯುವ ಬಗ್ಗೆ.

**ಉಲ್ಲೇಖ:**
1. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ37/6426/2005-06 ದಿನಾಂಕ 05.10.2005.
2. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಸಿಎಸ್/ಬಿ37/5966/2006-07/82 ದಿನಾಂಕ 25.03.2009.
3. ನಿಗಮದ ಸುತ್ತೋಲೆ. ಸಂಖ್ಯೆ: ಕವಿಪ್ರನಿನಿ/ಬಿ19/345-85-86 ದಿನಾಂಕ 19.12.2018.
4. ಕೇಂದ್ರೀಯ ಖರೀದಿ ಸಮಿತಿ ಸಭೆಯ ನಡಾವಳಿಗಳು ದಿನಾಂಕ 27.05.2021 ಮತ್ತು 29.05.2021.
5. ಆಂತರಿಕ ಕಚೇರಿ ಟಿಪ್ಪಣಿ ಸಂಖ್ಯೆ: ಕವಿಪ್ರನಿನಿ/ಬಿ37/ಸಿಪಿಸಿ/33220/2020-21/314 ದಿನಾಂಕ:19.08.2021

*******

ನಿಗಮದ ಆದೇಶ ಉಲ್ಲೇಖ (1) ಮತ್ತು (2) ರನ್ವಯ ಕವಿಪ್ರನಿನಿಯ ಯೋಜನೆಗಳ ಅಡಿಯಲ್ಲಿ ಟರ್ನ್‌ಕೀ ಏಜೆನ್ಸಿಗಳ ಮೂಲಕ ಸರಬರಾಜು ಮಾಡುವ ನಿರ್ದಿಷ್ಟ ಉಪಕರಣಗಳಿಗೆ ಬೆಲೆ ವ್ಯತ್ಯಾಸವನ್ನು ಒಪ್ಪಿಕೊಳ್ಳುವ ಮತ್ತು ಬೆಲೆ ಬದಲಾವಣೆಗೆ ಟೆಂಡರ್ ಡಾಕ್ಯುಮೆಂಟ್‌ಗಳಲ್ಲಿ ಸೂಕ್ತವಾದ ಷರತ್ತು ಅಳವಡಿಸುವ ಬಗ್ಗೆ ಸೂಚನೆಗಳನ್ನು ನೀಡಲಾಗಿದೆ. ಖರೀದಿಸಿದ ವಸ್ತುಗಳ ಮೇಲಿನ ಬೆಲೆ ವ್ಯತ್ಯಾಸದ ಷರತ್ತಿಗೆ ಸಂಬಂಧಿಸಿದಂತೆ ಟೆಂಡರ್ ದಾಖಲೆಗೆ ತಿದ್ದುಪಡಿಯನ್ನು ಉಲ್ಲೇಖ (3)ರ ಸೂತ್ತೋಲೆಯಲ್ಲಿ ನೀಡಲಾಗಿದೆ.

ಅಧಿಕಾರ ನಿಯೋಜನಾ ಕೈಪಿಡಿ-2018ರ, ಕ್ರಮ ಸಂಖ್ಯೆ 4.08ರ ಅನುಸಾರ, ಅಂತಹ ಬದಲಾವಣೆಗಳಿಗೆ ಕಾಂಟ್ರ್ಯಾಕ್ಟ್ ನಲ್ಲಿ ಅವಕಾಶವಿದ್ದಲ್ಲಿ, ಬೆಲೆ ವ್ಯತ್ಯಾಸಗಳಿಗೆ ಅನುಮೋದನೆ ನೀಡಲು ಕಾರ್ಯನಿರ್ವಾಹಕ ಇಂಜಿನಿಯರವರುಗಳಿಗೆ ಸಂಪೂರ್ಣ ಅಧಿಕಾರವನ್ನು ನೀಡಲಾಗುತ್ತದೆ.

ಆದಾಗ್ಯೂ, ಅಧಿಕಾರ ನಿಯೋಜನಾ ಕೈಪಿಡಿ-2018ರ ಕ್ರಮ ಸಂಖ್ಯೆ-4.09ರ ಅನುಸಾರ, ಅಂತಿಮ ವ್ಯತ್ಯಾಸಗಳಿಗೆ (ಸಂದರ್ಭಾನುಸಾರವಾಗಿ ಪ್ರಮಾಣ ವ್ಯತ್ಯಾಸಗಳು ಮತ್ತು ಬೆಲೆ ವ್ಯತ್ಯಾಸಗಳು ಎರಡನ್ನೂ ಒಳಗೊಂಡಿರುವಂತೆ) ಮತ್ತು ವರ್ಕ್‌ಸ್ಲಿಪ್‌ಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ಇಂಜಿನಿಯರೇನಾದರೂ ಅವಾರ್ಡ್ ಮಾಡಿದ್ದರೆ, ಕಾರ್ಯನಿರ್ವಾಹಕ ಇಂಜಿನಿಯರುಗಳಿಗೆ ಅವಾರ್ಡ್ ಮೊತ್ತದ 5% ವರಗೆ ವ್ಯತ್ಯಾಸಗಳನ್ನು

ಅನುಮೋದಿಸಲು ನಿಯೋಜಿಸಲಾಗಿದೆ. ಅಧೀಕ್ಷಕ ಇಂಜಿನಿಯರ್ ಅಥವಾ ಅವರ ಕೆಳಗಿನ ಪ್ರಾಧಿಕಾರವು ನೀಡಿದ ಅವಾರ್ಡ್‌ಗೆ ಸಂಬಂಧಿಸಿದಂತೆ ಅವಾರ್ಡ್ ಮೊತ್ತದ 7.5% ರವರೆಗೆ ವ್ಯತ್ಯಾಸಗಳನ್ನು ಅನುಮೋದಿಸಲು ನಿಯೋಜಿಸಲಾಗಿದೆ ಮತ್ತು ಮುಖ್ಯ ಇಂಜಿನಿಯರವರುಗಳಿಗೆ ಅಂತಹ ವ್ಯತ್ಯಾಸದ ಮೊತ್ತವು ಅವರು ನೀಡಿದ ಅವಾರ್ಡ್‌ಗೆ ಸಂಬಂಧಿಸಿದಂತೆ, ಕೆಳಗಿನ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಅಥವಾ ಮುಖ್ಯ ಇಂಜಿನಿಯರು (ಟಿ ಮತ್ತು ಪಿ) ರವರು ನೀಡಿದ ಅವಾರ್ಡ್‌ಗೆ ಸಂಬಂಧಿಸಿದಂತೆ ಎಲ್ಲಾ ವೋಲ್ಟೇಜ್ ಪ್ರವರ್ಗದಲ್ಲಿ ರೂ.2.00 ಕೋಟಿ (ಎರಡು ಕೋಟಿ) ಮೀರದಂತೆ, ಅವಾರ್ಡ್ ಮೊತ್ತದ 10% ರಷ್ಟು ನೀಡಲು ಅನುಮೋದಿಸಲು ನಿಯೋಜಿಸಲಾಗಿದೆ.

ಸಂಯೋಜಿತ ಕೇಂದ್ರೀಯ ಖರೀದಿ ಸಮಿತಿಯ ಸಭೆಯಲ್ಲಿ ನಡೆದ ಚರ್ಚೆಗಳ ಸಂದರ್ಭದಲ್ಲಿ, ಟರ್ನ್‌ಕೀ ಏಜೆನ್ಸಿಗಳಿಂದ ಪೂರ್ಣಗೊಂಡ ಯೋಜನೆಗಳ ಅಂತಿಮ ಪ್ರಮಾಣದ ವ್ಯತ್ಯಾಸಗಳಿಗೆ ಅನುಮೋದನೆ ನೀಡುವಾಗ, ಬೃಹತ್ ಕಾಮಗಾರಿ ವಿಭಾಗಗಳ ಕಾರ್ಯನಿರ್ವಾಹಕ ಇಂಜಿನಿಯರವರುಗಳು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯುವ ಮುನ್ನವೇ ಬೆಲೆ ವ್ಯತ್ಯಾಸ ಅನುಮೋದನೆಗಳಿಗೆ ಸಂಬಂಧಿಸಿದಂತೆ ಅಧಿಕೃತ ಜ್ಞಾಪನ ಪತ್ರಗಳನ್ನು ನೀಡುತ್ತಿರುವುದನ್ನು ಗಮನಿಸಲಾಗಿರುತ್ತದೆ. ಮುಂದುವರೆದು, ಬೆಲೆ ವ್ಯತ್ಯಾಸವನ್ನು, ಕಾಮಗಾರಿ ಪೂರ್ಣಗೊಳಿಸುವ ಗುರಿ ದಿನಾಂಕದ ನಂತರ ಒಪ್ಪಿಕೊಳ್ಳಲಾಗುತ್ತಿದೆ.

ಸಮಿತಿಯು ವಿವರವಾದ ಚರ್ಚೆಯ ನಂತರ ಎಲ್ಲಾ ವಲಯದ ಮುಖ್ಯ ಇಂಜಿನಿಯರುಗಳಿಗೆ ಮತ್ತು ಅವರ ಸಂಬಂಧಿತ ಅಧೀನ ಅಧಿಕಾರಿಗಳಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆಗೆ ಮುಂಚಿತವಾಗಿ ಬೆಲೆ ವ್ಯತ್ಯಾಸವನ್ನು ಅನುಮೋದಿಸುವ ಅಧಿಕೃತ ಜ್ಞಾಪನವನ್ನು ನೀಡದಂತೆ ಸೂಚಿಸಿತು.

ಇನ್ನು ಮುಂದೆ, ಎಲ್ಲಾ ವಲಯದ ಮುಖ್ಯ ಇಂಜಿನಿಯರು ಮತ್ತು ಅವರ ಸಂಬಂಧಿತ ಅಧೀನ ಅಧಿಕಾರಿಗಳು ಬೆಲೆ ವ್ಯತ್ಯಾಸಕ್ಕೆ ಅನುಮೋದನೆ ನೀಡಲು ಅಧಿಕೃತ ಜ್ಞಾಪನವನ್ನು ಹೊರಡಿಸುವ ಮೊದಲು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆದಿರತಕ್ಕದ್ದು. LOI ನಲ್ಲಿ ಉಲ್ಲೇಖಿಸಿದಂತೆ ಪೂರ್ಣಗೊಳಿಸುವ ಮೂಲ ಗುರಿ ದಿನಾಂಕದ ನಂತರದಲ್ಲಿ ಬೆಲೆ ವ್ಯತ್ಯಾಸವನ್ನು ಒಪ್ಪಿಕೊಳ್ಳತಕ್ಕದ್ದಲ್ಲ.

ಮೇಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

**ವ್ಯವಸ್ಥಾಪಕ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ**

B.R.H. 26/10/21

ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)
ಕವಿಪ್ರನಿನಿ

ಗೆ,

1) ಎಲ್ಲಾ ಮುಖ್ಯ ಇಂಜಿನಿಯರು/ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
2) ಎಲ್ಲಾ ಅಧೀಕ್ಷಕ ಇಂಜಿನಿಯರು/ನಿಯಂತ್ರಣಾಧಿಕಾರಿಗಳು,ಕವಿಪ್ರನಿನಿ
3) ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರು/ಉಪಲೆಕ್ಕ ನಿಯಂತ್ರಣಾಧಿಕಾರಿಗಳು,ಕವಿಪ್ರನಿನಿ
4) ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು.
5) ಹಿರಿಯ ಆಪ್ತಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು, ನಿರ್ದೇಶಕರು (ಹಣಕಾಸು) ನಿರ್ದೇಶಕರು (ಪ್ರಸರಣ), ನಿರ್ದೇಶಕರು (ಆ ಮತ್ತು ಮಾಸಂ) ಕವಿಪ್ರನಿನಿ, ಬೆಂಗಳೂರುರವರುಗಳ ಗಮನಕ್ಕೆ ತರಲು.

ಪ್ರತಿಯನ್ನು:

ಅಧೀಕ್ಷಕ ಇಂಜಿನಿಯರು(ವಿ) ಮಾಹಿತಿ ತಂತ್ರಜ್ಞಾನ, ಕವಿಪ್ರನಿನಿ ರವರಿಗೆ ಕವಿಪ್ರನಿನಿಯ ಅಂತರ್ಜಾಲದಲ್ಲಿ ಸುತ್ತೋಲೆಯನ್ನು ಅಪ್‌ಲೋಡ್ ಮಾಡುವ ವ್ಯವಸ್ಥೆ ಮಾಡಲು.